# ಬದುಕುವ ದಾರಿಯನ್ನು ಹುಡುಕಿಸುವ ‘ಬದುಕಲಾರದ ಬಲವಂತರು’



ವಿನಯಾ ಒಕ್ಕುಂದ

ಕಾದಂಬರಿ ಎಂಬ ಅಭಿವ್ಯಕ್ತಿ ಪ್ರಕಾರವು ಬಹು ಗಾಢವಾದ ಸೃಜನಶೀಲ ನಿಷ್ಠೆಯನ್ನು ಬಯಸುವಂಥದ್ದು. ಕಥೆಯು ದೀರ್ಘ ಕ್ರಮಣವನ್ನು ಪಡೆಯುವುದಷ್ಟೇ ಆದಾಗ ಅದು ಸರಳ ಜನಪ್ರಿಯ ಮಾದರಿಯಾಗುತ್ತದೆ. ಕಥೆಯ ಹಂದರದಲ್ಲಿ ಬೀಜರೂಪಿಯಾಗಿ ಬದುಕಿನ ತಾತ್ವಿಕತೆಯ ಪ್ರಶ್ನೆ ಜೀವಂತವಾಗಿದ್ದರೆ, ನಿರೂಪಣೆಯು ಬಹು ಆಯಾಮಗಳಲ್ಲಿ ವಿಸ್ತರಿತವಾಗುತ್ತದೆ. ಜೀವನದ ಸೂಕ್ಷ್ಮಗಳನ್ನು ಚಿಂತನೆಗೆ ಒಡ್ಡುವ ಪ್ರಕ್ರಿಯೆಯಾಗುತ್ತದೆ. ಅಂತಹ ಅಭಿವ್ಯಕ್ತಿಯ ಸವಾಲನ್ನು ಸ್ವೀಕರಿಸಿಕೊಂಡು ಯಶಸ್ವಿಯಾದ ಕಾದಂಬರಿ ಡಾ. ಎಂ.ಪಿ. ಉಮಾದೇವಿಯವರ ‘ಬದುಕಲಾರದ ಬಲವಂತರು’. 1988ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನವನ್ನು ಪಡೆದು ಮಹತ್ವದ ಕೃತಿಗಳ ಪಟ್ಟಿಗೆ ಸೇರಿದ್ದ ಕೃತಿಯಿದು. ಈ ಮಧ್ಯಂತರದ ಮೂರು ದಶಕಗಳಲ್ಲಿ ಕನ್ನಡದ ಮನಸ್ಸಿನಿಂದ ಮರೆಯಾಗಿಬಿಟ್ಟಿದ್ದ ಕಾದಂಬರಿಯನ್ನು ‘ಅಹರ್ನಿಶಿ ಪ್ರಕಾಶನ’ವು ಮರುಮುದ್ರಣ ಮಾಡಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮರೆಯಬಾರದ ಕೃತಿ ಎಂದು ನೆನಪಿಸಿದೆ.

ಮೂಲತಃ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲೂಕಿನವರಾದ ಉಮಾದೇವಿಯವರು ವೈದ್ಯೆಯಾಗಿ, ಪ್ರಾಧ್ಯಾಪಕಿಯಾಗಿ, ಸೂಕ್ಷ್ಮಸಂವೇದನೆಯ ಲೇಖಕಿಯಾಗಿ, ‘ಓ ಗಂಡಸೇ ನೀನೆಷ್ಟು ಒಳ್ಳೆಯವನು’ ಎಂಬ ನೀಳ್ಗತೆಗಳ ಸಂಕಲನವನ್ನು, ‘ಬದುಕಲಾರದ ಬಲವಂತರು’ ಎಂಬ ಕಾದಂಬರಿಯನ್ನೂ ಕೊಟ್ಟವರು. ಜೀವನದ ಕುರಿತು ವಿಶಿಷ್ಟ ಕನಸು–ಕಲ್ಪನೆಗಳ ಬಲೆ ನೇಯ್ದು, ‘ತನ್ನ ನೂಲ ತಾನೇ ಸುತ್ತಿಕೊಂಡ’ ತಹತಹದಲ್ಲಿ ಬದುಕಿನಿಂದ ವಿಮುಖರಾಗುತ್ತ, ತಮ್ಮದೇ ಜಗತ್ತನ್ನು ಕಟ್ಟಿಕೊಂಡವರು. ತನ್ನನ್ನು ಪರಶಿವನ ಪ್ರೇಯಸಿ ಉಮೆಯೆಂದು ಭಾವಿಸಿ, 16,128 ದ್ವಿಪದಿಗಳ ‘ಶೈವ ವಾತ್ಸಲ್ಯ’ ಎಂಬ ಮಹಾಕಾವ್ಯವನ್ನು ಕೊಟ್ಟರು. 2016ರಲ್ಲಿ ‘ಕಾಮದೇವನ ಕವಡೆಯಾಟ’ ಎಂಬ ಆತ್ಮಕಥೆ ಆಧಾರಿತ ಕಾದಂಬರಿಯನ್ನು ರಚಿಸಿದರು. ಒಂದೇ ಜನುಮದಲ್ಲಿ ಹಲವು ಬಾಳುಗಳನ್ನು ಬಾಳಿದವರಂತೆ ಬದುಕಿ ಹೋದರು. ಸೂಕ್ಷ್ಮ ಸಂವೇದನೆಯ ಅಪಾರ ಜೀವಪ್ರೀತಿಯ ಬರಹಗಾರ್ತಿಯ ಬದುಕಿನ ವಿಸ್ಮಯಕಾರಿ ಪಲ್ಲಟಗಳು, ಬರಹಗಾರ್ತಿಯರು ಎದುರಿಸಿದ ಒತ್ತಡಗಳ ಕಂಪನಾಂಕಗಳಂತೆ ಅನ್ನಿಸುತ್ತದೆ.

‘ಬದುಕಲಾರದ ಬಲವಂತರು’ ಕಾದಂಬರಿಯು,